## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 202/2021
ಸಿಡಬ್ಲ್ಯು ಃ 2
ಪಿಡಬ್ಲ್ಯು ಃ 1

ಹೆಸರು ಃ ಬಸವಣ್ಣೆಪ್ಪ ಸದೆಪ್ಪ ಉರಬನಟ್ಟಿ
ವಯಾ ಃ 49 ವರ್ಷ
ಉದ್ಯೋಗ ಃ ಅಬಕಾರಿ ಪೇದೆ, ಹುಕ್ಕೇರಿ ವಲಯ
ವಾಸ ಃ ಸಂಕೇಶ್ವರ ತಾಃ ಹುಕ್ಕೇರಿ

(ದಿನಾಂಕಃ 08-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)

**ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ**

ನಾನು ಅಬಕಾರಿ, ಹುಕ್ಕೇರಿ ವಲಯದಲ್ಲಿ 2011 ರಿಂದ 2016 ರ ವರೆಗೆ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

ದಿನಾಂಕ 13-02-2013 ರಂದು ಚಾಸಾ-5 ರವರು ಕರಗುಪ್ಪಿ ಗ್ರಾಮದಲ್ಲಿ ಬಸವಣ್ಣಿ ಗುಟಗುದ್ದಿ ಎಂಬುವವರು ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಮಾಹಿತಿ ತಿಳಿಸಿರುತ್ತಾರೆ. ಅದರಂತೆ ನಮಗೆ ಪಾಶ್ಚಾಪೂರ ರೈಲ್ವೆ ಸ್ಟೇಶನಗೆ ಬರಲು ತಿಳಿಸಿರುತ್ತಾರೆ. ಅದರಂತೆ ನಾನು ಮತ್ತು ಚಾಸಾ-3 ರವರು ಪಾಶ್ಚಾಪೂ ರೈಲ್ವೆಸ್ಟೇಶನಗೆ ಹೋಗಿರುತ್ತೇವೆ. ಸ್ಥಳದಲ್ಲಿ ಚಾಸಾ-4 ರಿಂದ 6 ರವರು ಹಾಜರ ಇದ್ದರು. ಸಂಜೆ 4-30 ಗಂಟೆಗೆ ಚಾಸಾ-1 ರವರು ಸ್ಥಳಕ್ಕೆ ಬಂದಿದ್ದು ನನಗೆ ಬಾತ್ಮಿ ಮಾಹಿತಿ ತಿಳಿಸಿರುತ್ತಾರೆ. ನಮ್ಮನ್ನು ಪಂಚರಾಗಿ ಸಹಕರಿಸಲು ಕೋರಿದ್ದು ನಾವು ಒಪ್ಪಿ ದ್ದರಿಂದ ಕರಗುಪ್ಪಿ ಗ್ರಾಮದ ಜಾರಕಿಹೊಳಿ ಕ್ರಾಸ ಬಳಿ ವಾಚ್ ಮಾಡುತ್ತಿರುವಾಗ ಅಲ್ಲಿ ಒಬ್ಬ ವ್ಯಕ್ತಿ ಪ್ಲಾಸ್ಟಿಕ ಕ್ಯಾನ ಇಟ್ಟುಕೊಂಡು ಸಂಶಯಾಸ್ಪದವಾಗಿ ಓಡಾಡುತ್ತಿರುವುದು ಕಂಡು ಬಂದಿದ್ದು ಅವನ ಹತ್ತಿರ ಕೆಲವು ಜನರು ನಿಂತಿದ್ದರು. ಅವನೇ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಪಡಿಸಿಕೊಂಡು ದಾಳಿ ಮಾಡಲಾಗಿ ಅಲ್ಲಿದ್ದ ಜನರು ಓಡಿ ಹೋಗಿದು ಅವನೂ ಸಹ ಕ್ಯಾನು ಬಿಟ್ಟು ಓಡಿ ಹೋಗಿರುತ್ತಾನೆ. ಪೋಲಿಸರು ಹಿಡಿಯಲು ಪ್ರಯಿತ್ನ ಪಟ್ಟಿದ್ದು ಅವರು ಸಿಕ್ಕಿರುವುದಿಲ್ಲ. ಚಾಸಾ-1 ರವರು ಸ್ಥಾನಿಕ ಚೌಕಾಶಿ ಮಾಡಲಾಗಿ ಆತನ ಹೆಸರು ಬಸವಣ್ಣಿ ಬಾಳಪ್ಪಾ ಗುಟಗುದ್ದಿ ಎಂದು ತಿಳಿದು ಬಂದಿರುತ್ತದೆ. ನಂತರ ಸ್ಥಳದಲ್ಲಿದ್ದ ಕ್ಯಾನನ್ನು ಪರಿಶೀಲಿಸಲಾಗಿ ಅದರಿಂದ ಘಾಟು ವಾಸನೆ ಬಂದಿದ್ದು ಅದರಲ್ಲಿ 9 ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂದಿರುತ್ತದೆ. ಅದರಿಂದ 180 ಮಿಲಿಯಷ್ಟು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಅರಗಿನಿಂದ ಶೀಲು ಮಾಡಿ ನಮ್ಮಗಳ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು. ಪಂಚನಾಮೆಯನ್ನು 05-30 ರಿಂದ 06-30 ರ ವರೆಗೆ ಬರೆದು ನಮ್ಮ ಸಹಿ

ಪಡೆದಿರುತ್ತಾರೆ. ಸಾಕ್ಷಿ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-1 ಎಂದು ಗುರುತಿಸಲಾಗಿ ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ಎಂದು ಗುರುತಿಸಲಾಯಿತು. ಆರೋಪಿ ಈ ದಿನ ನಾಯಾಲಯದ ಮುಂದೆ ಗೈರು ಹಾಜರ ಇದ್ದು ಆತನನ್ನು ನೋಡಿ ಗುರುತಿಸಲು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟಿ ಸವಾಲುಃ ಶ್ರೀಮತಿ ಎಂ ಕೆ ಕೆ ಆರೋಪಿ ಪರ ವಕೀಲರಿಂದ -**

ಚಾಸಾ-3 ರವರು ಇವರು ದಾದಬಾನಟ್ಟಿ ಊರಿನವರು. ಕರಗುಪ್ಪಿ ಮತ್ತು ಬಸಾಪೂರ ಜಾರಕಿಹೊಳಿ ಕ್ರಾಸ ಬಳಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ . ಅಲ್ಲಿ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ . ಸಾಮಾನ್ಯವಾಗಿ ಸ್ಥಳಿಕರನ್ನು ಪಂಚರನ್ನಾಗಿ ಮಾಡುತ್ತಾರೆ ಎಂದರೆ ಸರಿ . ಆದರೆ ನಮ್ಮ ಸಾಹೇಬರು ನಮ್ಮನ್ನು ಪಂಚರನ್ನಾಗಿ ನೇಮಿಸಿರುತ್ತಾರೆ.

ದಿನಾಂಕ 13-02-2013 ರಂದು ಚಾಸಾ-1 ರವರು ನಮಗೆ ಪಾಶ್ಚಾಪೂರ ರೈಲ್ವೆ ಸ್ಟೇಶನಗೆ ಬರಲು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾವು ಸ್ಥಳಕ್ಕೆ ಹೋದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ ಕ್ಯಾನನಲ್ಲಿ ಕಳ್ಳಭಟ್ಟಿ ಸಾರಾಯಿ ಇಟ್ಟುಕೊಂಡು ಸಂಶಯಾಸ್ಪದವಾಗಿ ಓಡಾಡುತ್ತಿರುವುದು ಕಂಡು ಬಂದಿದ್ದು ಅವನ ಹತ್ತಿರ ಕೆಲವು ಜನರು ನಿಂತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವನೇ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಪಡಿಸಿಕೊಂಡು ದಾಳಿ ಮಾಡಲಾಗಿ ಅಲ್ಲಿದ್ದ ಜನರು ಓಡಿ ಹೋಗಿದು ಅವನೂ ಸಹ ಕ್ಯಾನು ಬಿಟ್ಟು ಓಡಿ ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಹಿಡಿಯಲು ಪ್ರಯತ್ನ ಪಟ್ಟಿದ್ದು ಆತ ಸಿಕ್ಕಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಸ್ಥಾನಿಕ ಚೌಕಾಶಿ ಮಾಡಲಾಗಿ ಆತನ ಹೆಸರು ಬಸವಣ್ಣಿ ಬಾಳಪ್ಪಾ ಗುಟಗುದ್ದಿ ಎಂದು ತಿಳಿದು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುಮಾ-1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ
(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ